ಬಿಡಾಂಗಿಲ್ಲ. ನೀನು ಚಿತ್ರ ಬರೆಯೋದನ್ನು ನಿನ್ನ ಪಾಡಿಗೆ ಇಟ್ಕೋ, ಮನಸ್ಸಿಗೆ ಹಚ್ಚಕೋಬ್ಯಾಡ' ಎಂದು. ನಮ್ಮ ಅಂಗಡಿಗೆ ಬರುವ ಹಲವರನ್ನು ತೋರಿಸಿ, 'ಆತ ಎಷ್ಟೊಂದು ಕಲ್ತಿದಾನೆ, ಆದರೂ ನೋಡು ಫ್ಯಾಮಿಲಿ ಬಿಜಿನೆಸ್ ಮಾಡ್ತಿದಾನೆ. ಆ ಮನೆಯ ಹುಡುಗ ನೋಡು, ಕಲಿತರೂ ಹೊಟ್ಟೆ ತುಂಬುವಷ್ಟು ಪಗಾರ ಇಲ್ಲ. ನೀನು ಕೂಡ ಇಷ್ಟು ದೊಡ್ಡ ಮನೆತನ ಅಂಗಡಿ ಕೆಲಸ ಬಿಡಬಾರದು. ಮನೆತನದ ಕೆಲಸ ಮುಂದುವರಿಸಿಕೊಂಡು ಹೋಗಲೇಬೇಕು' ಇದು ಪ್ರತಿದಿನದ ಉಪದೇಶ'.

'ಹುಬ್ಬಳ್ಳಿ ನೆಹರೂ ಮೈದಾನದ ಸನಿಹವೇ ನಮ್ಮ ಸಲೂನ್ ಇತ್ತು. ಅಲ್ಲಿಂದಲೇ ನಾನು ಹುಬ್ಬಳ್ಳಿ ಲ್ಯಾಮಿಂಗ್ಟನ್ ಹೈಸ್ಕೂಲ್‌ಗೆ ಹೋಗಬೇಕು. ಬೆಳಿಗ್ಗೆ 6ಕ್ಕೆ ಅಂಗಡಿಗೆ ಬಂದರೆ ಸುಮಾರು 10 ಕ್ಕೆ ಸ್ಕೂಲ್. ಬಳಿಕ ಸಂಜೆ 5ಕ್ಕೆ ಅಂಗಡಿಗೆ ಮರಳಿದರೆ, ರಾತ್ರಿ 10 ರವರೆಗೆ ಅಲ್ಲಿಯೇ ಇರಬೇಕಿತ್ತು. ಅಣ್ಣಂದಿರು ಮಾಡುವ ಕೆಲಸ ನೋಡುತ್ತಿದ್ದರೂ ನನಗೆ ಇನ್ನೇನನ್ನೋ ಕಲಿಯಬೇಕು ಎನ್ನುವ ತುಡಿತ. ಆದರೆ, ಕ್ಷೌರಿಕ ವೃತ್ತಿಯ ಒತ್ತಡದಲ್ಲಿ ಕಲಾವಿದನಾಗುವ ಆಸೆ ಹೆಚ್ಚೂಕಮ್ಮಿ ಕಮರಿಯೇ ಹೋಗಿತ್ತು'.

'ಹೈಸ್ಕೂಲ್ ಮುಗಿದ ಬಳಿಕ ಕಾಲೇಜಿಗೆ ಹೋಗುವ ಆಸೆಯಂತೂ ನಮಗ್ಯಾರಿಗೂ ಇರಲೇ ಇಲ್ಲ. ಹೇಗೂ ನಮ್ಮ ಸಲೂನ್ ಇದೆ. ಅಲ್ಲೇ ಕೆಲಸ ಮಾಡಿಕೊಂಡಿದ್ದರಾಯಿತು ಅಂದುಕೊಂಡು ಹಾಯಾಗಿದ್ದೆ. ಒಂದು ದಿನ ಧಾರವಾಡದಿಂದ ಕುರಡಗಿ ಸರ್ ಅಂತ ನಮ್ಮ ನಮ್ಮ ಅಣ್ಣನ ಕಸ್ಟಮರ್ ಸಲೂನ್‌ಗೆ ಬಂದವರು, ನನ್ನನ್ನು ಚಿತ್ರಕಲೆಗೆ ಸೇರಿಸುವಂತೆ ಸಲಹೆ ಕೊಟ್ರು. ಅದಕ್ಕೆ ಒಪ್ಪಿದ ಅಣ್ಣ 'ಬರೇ ಒಂದು ವರ್ಷ ಅಷ್ಟೇ ಕಾಲೇಜಿಗೆ ಕಳಿಸೋದು. ಆಮೇಲೆ ಮತ್ತೆ ಸಲೂನ್ ನೋಡಿಕೊಳ್ಳಬೇಕು' ಎನ್ನುವ ಕಂಡೀಷನ್ ಮೇಲೆಯೇ ಹುಬ್ಬಳ್ಳಿಯ ವಿಜಯಮಹಾಂತೇಶ ಕಲಾ ಕಾಲೇಜಿಗೆ ಹೋಗಿ ಪ್ರಾಂಶುಪಾಲರನ್ನು ಕಂಡು, ಒಂದೇ ವರ್ಷ ನಮ್ಮ ಹುಡುಗ ಇಲ್ಲಿ ಕಲಿಯೋದು ಅಂತ ಪದೇ ಪದೇ ಹೇಳಿ ಸೇರಿಸಿ ಬಂದ್ರು'.

'ಹಾಗೂ ಹೀಗೂ ಮಾಡಿ ಡ್ರಾಯಿಂಗ್ ಕೋರ್ಸ್‌ಗೆ ಸೇರಿದೆ. ಆದರೆ, ಒಂದೇ ವರ್ಷಕ್ಕೆ ಬಿಟ್ಟು ಬಿಡುವ ಕಾರಣ ಕೋರ್ಸನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆದರೂ ಎರಡು ವರ್ಷ ಅಭ್ಯಾಸ ಮಾಡಿದೆ. ಚಿತ್ರಕಲಾ ಶಿಕ್ಷಣ ಒಂದಿಷ್ಟು ಖರ್ಚಿನದು ಅಂತಾನೂ ಅನ್ನಿಸಿತ್ತು. ಹಿಂಗಾಗಿ ನನಗೆ ಎರಡು ವರ್ಷ ಮುಗಿದರೆ ಸಾಕು ಅನ್ನಿಸಿಬಿಟ್ಟಿತ್ತು. ಅದು ಮುಗಿದ ಕೂಡಲೇ ಮರಳಿ ನನ್ನ ಹೊಸ ಸಲೂನ್‌ಗೆ ಬಂದು ಕ್ಷೌರಿಕ ವೃತ್ತಿ ಆರಂಭಿಸಿದೆ. ಆದರೆ, ಒಳ ಮನಸ್ಸಿನ ತುಡತದಿಂದಾಗಿ ಅಷ್ಟಿಷ್ಟು ಚಿತ್ರ ಬರೆದು ಸಲೂನ್‌ನ ಗೋಡೆಗಳ ತುಂಬಾ ನೇತು ಹಾಕಿದ್ದೆ. ಎರಡು ವರ್ಷ ಹೀಗೆಯೇ ಕಳೆದೆ. ಅಂತಹ ಒಂದು ಮುಂಜಾನೆ ಬೆಂಗಳೂರಿನ ಗ್ರಾಹಕರೊಬ್ಬರು ಮನಮುಟ್ಟುವಂತೆ ಹೇಳಿದ್ದೇ ಬದುಕಿಗೆ ಟರ್ನಿಂಗ್ ಪಾಯಿಂಟ್ ಆಯ್ತು'.

## ಮರಳಿ ಕಾಲೇಜಿಗೆ...





'ಚಿತ್ರಕಲೆಯಲ್ಲಿ ಮುಂದುವರೆಯಲು ನಿರ್ಧರಿಸಿ ಅಣ್ಣನಿಗೊಂದು ಸುದೀರ್ಘ ಪತ್ರ ಬರೆದೆ. ನೇರವಾಗಿ ಮಾತನಾಡುವ ಧೈರ್ಯ ಇರಲಿಲ್ಲ. ಹೀಗಾಗಿ ನನ್ನೆಲ್ಲ ಭಾವನೆಯನ್ನು ತೋಡಿಕೊಂಡಿದ್ದ ಆ ಪತ್ರವನ್ನು ಯಾವಾಗ ಅವರು ಓದಿದರೋ, 'ಸರಿ ಬಿಡು, ಅವ ಏನಾರ ಮಾಡಿಕೊಳ್ಳಲಿ' ಅಂತ ಬಿಟ್ಟುಬಿಟ್ಟರು. ಆಗ ಮರಳಿ ಅದೇ ಕಾಲೇಜಿಗೆ ಪ್ರವೇಶ ಪಡೆದೆ'.

'ಎರಡನೇ ಇನಿಂಗ್ಸ್‌ನಲ್ಲಿ ನನ್ನೊಳಗಿನ ಕಲಾವಿದ ಜಾಗೃತನಾಗಲು ಆರಂಭಿಸಿದ. ಏನಾದರೂ ಸಾಧಿಸಿಯೇ ತೀರಬೇಕು ಅಂದುಕೊಂಡು ಚಡಪಡಿಕೆ ಶುರುವಾಯಿತು. ಆ ಎರಡು ವರ್ಷ ಕಲೆಯಿಂದ ದೂರಾಗಿದ್ದರಿಂದ ನಾನು ಮತ್ತೆ ಹೊಸ ಕನಸುಗಳೊಂದಿಗೆ ಚಿಗಿತುಕೊಂಡಿದ್ದೆ. ಕಾಲೇಜಿನಲ್ಲಿ ಕಲಿಸುವುದು ಸಾಕಾಗ್ತಾ ಇರಲಿಲ್ಲ. ನನಗೆ ಪೋರ್ಟ್ರೇಟ್ (ಭಾವಚಿತ್ರ) ರಚನೆ ಭಾಳ ಆಸಕ್ತಿಯ ವಿಷಯ. ಅದರಲ್ಲೇ ಹೆಚ್ಚಿನ ಸಾಧನೆ ಮಾಡಲು ಮುಂದಾದೆ. ಆಗ ನನಗೆ ನೆರವಾದವರು ಕಲಾವಿದ ಶೇಖರ ಬಳ್ಳಾರಿ. ನಮ್ಮ ಸೀನಿಯರ್ ಅವರು. ಅವರಿಂದ ಬಹಳ ಕಲಿತೆ'.

## ಗ್ಯಾಲರಿಯಾದ ಸಲೂನ್

'ಕಾಲೇಜು ಏನೋ ಮುಗಿದಿತ್ತು. ಆದರೆ ಮತ್ತೆ ಶೂನ್ಯ. ನೌಕರಿ ಆಸೆ ಇರಲಿಲ್ಲ. ಪೇಂಟಿಂಗ್‌ನಲ್ಲಿ ಏನಾದರೂ ಸಾಧಿಸುವ ತುಡಿತ ಮಾತ್ರ ಹೆಚ್ಚಾಯ್ತು. ಆ ಸಮಯದಲ್ಲಿ ಕಲಾ ಶಾಲೆಯಲ್ಲಿ ಕಲಿತ ಕಲಾವಿದರು ಆರ್ಟ್ ಗ್ಯಾಲರಿ, ಸ್ಟುಡಿಯೊ ಮಾಡಿಕೊಳ್ತಿದ್ದರು. ಹೀಗಾಗಿ ಹುಬ್ಬಳ್ಳಿಯ ಮಧುರಾ ಕಾಲೊನಿಯಲ್ಲಿ ಖಾಲಿ ಇದ್ದ ನಮ್ಮ ಸಲೂನ್ ಒಂದನ್ನೇ 'ಕಲಾ ಗ್ಯಾಲರಿ' ಮಾಡಿದೆ. ನನ್ನ ಅನೇಕ ಮಿತ್ರರು ಸಹಕಾರ ನೀಡಿದರು. ನಕ್ಕವರೂ ಇದ್ದರು'.

'ನನ್ನ ಗ್ಯಾಲರಿಗಾಗಿ ಅವರಿವರಿಂದ ಪೇಂಟಿಂಗ್ಸ್ ಸಂಗ್ರಹಿಸಲು ತೊಡಗಿದೆ. ಆದರೆ ಯಾರೂ ಆಸಕ್ತಿಯಿಂದ ಕೊಡುತ್ತಿರಲಿಲ್ಲ. ಬಹಳ ಜನರನ್ನು ಬೇಡ್ತಿದ್ದೆ. ಆಗ ನನ್ನ ಗುರು ಶೇಖರ ಬಳ್ಳಾರಿಯವರನ್ನೇ ಕೇಳಿದೆ. ಅವರಂದ್ರು, 'ನೀವ್ಯಾಕೆ ಬೇರೆಯವರ ಹತ್ತಿರ ಬೇಡ್ತೀರಿ. ನೀವು ಕಲಾವಿದರಲ್ವಾ? ನಿಮ್ಮದೇ ಪೇಂಟಿಂಗ್ಸ್ ಸಂಗ್ರಹ ಮಾಡ್ರಿ' ಅಂತ'.

'ಅರೇ ನಾ ಏನು ಮಾಡಬೇಕು? ಯಾವ ಪೇಂಟಿಂಗ್ಸ್ ಮಾಡಿದರೆ ಜನಾ ತಗೋತಾರೆ? ನಾನು ಈವರೆಗೆ ಪೇಂಟಿಂಗ್ಸ್ ಮಾಡೇ ಇಲ್ಲವಲ್ಲ. ಭಾವಚಿತ್ರ ಬೇರೆ, ಪೇಂಟಿಂಗ್ಸ್ ಬೇರೆ. ನಾನಿನ್ನೂ ಕಲಾವಿದನೇ ಆಗಿಲ್ವಲ್ಲ ಅಂತ ತಲೆ ಕೆಡಿಸಿಕೊಂಡೆ. ಭಾವಚಿತ್ರ ಬರೆಯೋದೇನೋ ಇಷ್ಟ. ಅದನ್ನೇ ಬಳಸಿಕೊಂಡು ಪೇಂಟಿಂಗ್ಸ್ ಮಾಡಬಹುದಾ ಅಂತ ಯೋಚಿಸಿದೆ. ಏನು ಮಾಡಬೇಕು ಅನ್ನುವ ಯೋಚನೆಯಲ್ಲಿಯೇ 4–5 ವರ್ಷ ಕಳೆದೆ. ಗ್ಯಾಲರಿ ಮಾಡಿದ್ದರಿಂದ ಮನೆಯಲ್ಲಿ ಅಮ್ಮ ಬೇರೆ ಪ್ರತಿದಿನ ಕೇಳೋರು, 'ಎಷ್ಟು ಸೇಲಾತು ಮಗಾ ಪೇಂಟಿಂಗ್ಸ್' ಅಂತ. 'ಅಮ್ಮ ಇದು ಕಿರಾಣಿ ಶಾಪ್ ಅಲ್ಲ ದಿನಾ ಖರ್ಚಾಗೋಕೆ. ಜನ ಬರ್ತಾರೋ ಇಲ್ಲೋ, ಯಾವಾಗ ಸೇಲ್ ಆಗತ್ತೋ ಗೊತ್ತಿಲ್ಲ. ನೋಡೋಣ ಕೆಲಸ ಮಾಡತೀನಿ' ಅಂತ ಶುರು ಮಾಡಿದೆ. ಈ ನಡುವೆ ವಿದ್ಯಾರ್ಥಿಗಳಿಗೆ ಪ್ರತಿದಿನ ಕಲಾ ತರಗತಿ ಮಾಡ್ತಿದ್ದೆ. ಹೀಗಾಗಿ ಒಂದಿಷ್ಟು ದುಡ್ಡು ಬರ್ತಿತ್ತು. ಇದರ ನಡುವೆ